ದಿನಾಂಕ 28.07.2021 ರಂದು ಹೊರಡಿಸಿದ ಆದೇಶದ ಮೇರೆಗೆ ದಿನಾಂಕ 28.10.2021 ರಂದು ಸಾಕ್ಷಿಯನ್ನು ಪುನಃ ಕರೆಯಿಂದ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಿ ಪಾಟೀಸವಾಲಿಗೆ ಒಳಪಡಿಸಲಾಯಿತು.

**ಪಾಟೀ ಸವಾಲುಃ ಶ್ರೀ.ಕೆ.ಎನ್.ಜಿ. ವಕೀಲರಿಂದ – ಆರೋಪಿಗಳ ಪರವಾಗಿಃ**

5.ನನ್ನ ಅಣ್ಣ ತೀರಿಕೊಂಡಂತಹ ಸಂದರ್ಭದಲ್ಲಿ ಆತನ ಪ್ರಾಯ 30 ವರ್ಷ ಇದ್ದಿರಬಹುದು. ನನ್ನ ಮೃತ ಅಣ್ಣ ಮದುವೆಯ ನಂತರ ಬೇರೆ ವಾಸವಾಗಿದ್ದನು ಎಂದರೆ ಸರಿಯಲ್ಲ.

6.ಆರೋಪಿಗಳು ಯಾವ ಸಂದರ್ಭದಲ್ಲೂ ನನ್ನ ಮೃತ ಅಣ್ಣನ ಜೊತೆ ಕೆಲಸ ಕಾರ್ಯಗಳನ್ನು ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮೃತ ಅಣ್ಣನ ಜೊತೆಯಲ್ಲಿ ಆರೋಪಿಗಳು ಕೊಳವೆ ಬಾವಿ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದರು ಎಂಬ ಸಂಗತಿಯನ್ನು

ಪುಷ್ಟೀಕರಿಸುವಂತೆ ನಾನು ಯಾವುದೇ ದಾಖಲಾತಿಗಳನ್ನು ಅಧಿಕಾರಿಗಳಿಗೆ ನೀಡಿಲ್ಲ.

7.ಆರೋಪಿ ವೆಂಕಟೇಶ ಘಟನೆಯ ಸಮಯ ಮತ್ತು ಸಂದರ್ಭದಲ್ಲಿ ಆಟೋ ಓಡಿಸಿಕೊಂಡು ತನ್ನ ಅತ್ತೆಯ ಮನೆಯಲ್ಲಿ ನೆಲೆಸಿದ್ದು, ಮತ್ತೊಬ್ಬ ಆರೋಪಿ ಪಶುಸಂಗೋಪನೆ ಮಾಡಿಕೊಂಡು ತನ್ನ ಪಾಡಿಗೆ ತಾನು ಇದ್ದು, ಅವರುಗಳು ಯಾವ ಕಾಲಕ್ಕೂ ನನ್ನ ಅಣ್ಣನೊಡನೆ ಸಂಪರ್ಕ ಹೊಂದಿರುವುದಿಲ್ಲ ಮತ್ತು ನನ್ನ ಅಣ್ಣನನ್ನು ನಾನು ಈಗಾಗಲೇ ನುಡಿದಂತೆ ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ.

8.ಆರೋಪಿಗಳು ನನ್ನ ಸಂಬಂಧಿಕರಾಗಿದ್ದು, ಅವರ ಮೇಲಿನ ಹಳೆಯ ವೈಶಮ್ಯದಿಂದ ಅಸತ್ಯ ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

9.ನಾನು ಉಲ್ಲೇಖಿಸಿರುವ ದ್ವಿಚಕ್ರ ವಾಹನ ನನ್ನ ಅಣ್ಣನ ಸ್ವಾಧೀನಾನುಭವದಲ್ಲಿ ಇತ್ತು ಎಂಬ ಸಂಗತಿಯನ್ನು ಪುಷ್ಟೀಕರಿಸುವಂತೆ ಆರ್‌ಸಿ ಪುಸ್ತಕ ದಾಖಲೆಯನ್ನು ನೀಡಿದ್ದೇನೆ. ಸದರಿ ವಾಹನವನ್ನು ಅಡಮಾನಕ್ಕೆ ಒಳಪಡಿಸಲಾಗಿತ್ತು ಎಂಬ ಸಂಗತಿಯನ್ನು ಪುಷ್ಟೀಕರಿಸುವಂತೆ ನಾನು ದಾಖಲಾತಿ ನೀಡಿರುವುದಿಲ್ಲ. ನನ್ನ ಅಣ್ಣ ದುರಸ್ತಿಯ ಸಲುವಾಗಿ ತನ್ನ ವಾಹನವನ್ನು ಬಿಟ್ಟಿದ್ದನು ಎಂದರೆ ಸರಿಯಲ್ಲ.

10. ನನ್ನ ಮೃತ ಅಣ್ಣ ಕಾಲು ಜಾರಿ ಆಕಸ್ಮಿಕವಾಗಿ ನೀರಿನಲ್ಲಿ ಬಿದ್ದು, ಅಸುನೀಗಿದ್ದಾನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಸಿದ್ದಲಿಂಗ ಪ್ರಭು)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.